ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/16/2016-17. ದಿನಾಂಕ 27-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕಾಡಮ್ಮ ತಂದೆ ತೆಲುಗು ಬಸಪ್ಪ<br>2)ಗಂಗಮ್ಮ ತಂದೆ ತೆಲುಗು ಬಸಪ್ಪ<br>3)ನಾಗಮ್ಮ ಗಂಡ ಲೇಟ್ ತೆಲುಗು ದುರುಗಪ್ಪ<br>4)ಲಕ್ಷ್ಮಣ ತಂದೆ ಲೇಟ್ ತೆಲುಗು ದುರುಗಪ್ಪ<br>5)ಶ್ರೀನಿವಾಸ ತಂದೆ ಲೇಟ್ ತೆಲುಗು ದುರುಗಪ್ಪ.<br>ಗುಡೇಕೋಟೆ ಗ್ರಾಮ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಗುಡೇಕೋಟೆ |
| ಕೂಡ್ಲಿಗಿ ತಾಲೂಕು ಗುಡೇಕೋಟೆ ಗ್ರಾಮದ ಸನಂ 837ಬಿ. ವಿಸ್ತೀರ್ಣ 14-62 ಎಕ್ರೆ ಜಮೀನನ್ನು ಸಿವಿಲ್ ಕೋರ್ಟ ಆದೇಶದ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಗುಡೇಕೋಟೆ ಗ್ರಾಮದ ಸನಂ 837ಬಿ. ವಿಸ್ತೀರ್ಣ 14-62 ಎಕ್ರೆ ಜಮೀನನ್ನು ಸದರಿ ಗ್ರಾಮದ ಕಾಡಮ್ಮ ತಂದೆ ತೆಲುಗು ಬಸಪ್ಪ. ಗಂಗಮ್ಮ ತಂದೆ ತೆಲುಗು ಬಸಪ್ಪ. ಇವರು ಕೂಡ್ಲಿಗಿಯ ಸಿವಿಲ್ ಕೊಟ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ ಎಫ್.ಡಿ.ಪಿ.ನಂಬರ್: 09/1997 ರ ದಿನಾಂಕ 06-08-2015. ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಗುಡೇಕೋಟೆ ಇವರು ನಮೂನೆ-21 ನೋಟಿಸನ್ನು ದಿನಾಂಕ 16-05-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಕೋರ್ಟ ಆದೇಶದ ಪ್ರಕಾರ ನಮೂನೆ-21 ರ ನೋಟಿಸ್ಸು ಹಾಗೂ ಚೆಕ್‌ಲಿಸ್ಟನ್ನು ತಪ್ಪಾಗಿ ತೆಗೆದಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 32/2015-16. ದಿನಾಂಕ 17-06-2016. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 25-08-2016 ರಿಂದ 27-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಗುಡೇಕೋಟೆ ಗ್ರಾಮದ ಸನಂ 837ಬಿ. ವಿಸ್ತೀರ್ಣ 14-62 ಎಕ್ರೆ ಜಮೀನು ಕೂಡ್ಲಿಗಿಯ ಸಿವಿಲ್ ಕೊರ್ಟ ಹಾಗೂ ಜೆ.ಎಂ.ಎಫ್.ಸಿ.ನ್ಯಾಯಾಲಯ ಓ.ಎಸ್.ನಂಬರ್: 01/1983 ರಲ್ಲಿ ವಾದಿ ಮತ್ತು ಪ್ರತಿವಾದಿಗಳ ವಿಚಾರಣೆ ನಡೆದು ತಾಲೂಕು ಸರ್ವೆಯರ್ ಇವರ ವರದಿ ಪ್ರಕಾರ ಸದರಿ ಜಮೀನಿನಲ್ಲಿ ವಾದಿಗಳಿಗೆ 1/2 ಹಿಸ್ಸಾಯಂತೆ ಮತ್ತು ಪ್ರತಿವಾದಿಗಳಿಗೆ 1/2 ಹಿಸ್ಸಾಯಂತೆ ಎಫ್.ಡಿ.ಎಫ್.ನಂಬರ್: 09/1997 ದಿನಾಂಕ 06-08-2015 ರಲ್ಲಿ ಕೋರ್ಟ ಡಿಕ್ರಿಯಾಗಿರುತ್ತದೆ. ಕಾರಣ ಸದರಿ ಕೊರ್ಟ ಡಿಕ್ರಿ ಪ್ರಕಾರ ಸದರಿ ಜಮೀನಿನಲ್ಲಿ ವಾದಿಗಳಿಗೆ 1/2 ಹಿಸ್ಸಾಯಂತೆ ಮತ್ತು ಪ್ರತಿವಾದಿಗಳಿಗೆ 1/2 ಹಿಸ್ಸಾಯಂತೆ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಪು.ತಿ.ನೋ-2

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಮಾನ್ಯ ಸಿವಿಲ್ ಕೋರ್ಟ ಆದೇಶದ ಪ್ರಕಾರ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಗುಡೇಕೋಟೆ ಗ್ರಾಮದ ಸನಂ 837ಬಿ. ವಿಸ್ತೀರ್ಣ 14-62 ಎಕ್ರೆ ಜಮೀನನ್ನು ಕೂಡ್ಲಿಗಿಯ ಸಿವಿಲ್ ಕೋರ್ಟ ಹಾಗೂ ಜೆ.ಎಂ.ಎಫ್.ಸಿ.ನ್ಯಾಯಾಲಯ ಓ.ಎಸ್.ನಂಬರ್: 01/1983 ದಿನಾಂಕ 02-09-1997 ಹಾಗೂ ಎಫ್.ಡಿ.ಪಿ.ನಂಬರ್: 09/1997 ದಿನಾಂಕ 06-08-2015 ರ ಕೋರ್ಟ ಡಿಕ್ರಿ ಪ್ರಕಾರ

| ಕ್ರಸಂ | ಹೆಸರು | ಸನಂ | ವಿಸ್ತೀರ್ಣ |
|---|---|---|---|
| 1 | 2 | 3 | 4 |
| 1 | 1)ತೆಲುಗು ನಾಗಮ್ಮ ಗಂಡ ತೆಲುಗು ಬಸಪ್ಪ.<br>2)ಕಾಡಮ್ಮ ತಂದೆ ತೆಲುಗು ಬಸಪ್ಪ<br>3)ಗಂಗಮ್ಮ ತಂದೆ ತೆಲುಗು ಬಸಪ್ಪ<br>ವಾದಿಗಳು | 837ಬಿಪೈಕಿ. | 7-31 |
| 2 | 1)ನಾಗಮ್ಮ ಗಂಡ ಲೇಟ್ ತೆಲುಗು ದುರುಗಪ್ಪ.<br>2)ಲಕ್ಷ್ಮಣ ತಂದೆ ಲೇಟ್ ತೆಲುಗು ದುರುಗಪ್ಪ.<br>3)ಶ್ರೀನಿವಾಸ ತಂದೆ ಲೇಟ್ ತೆಲುಗು ದುರುಗಪ್ಪ.<br>4)ಬಸಮ್ಮ ತಂದೆ ಲೇಟ್ ತೆಲುಗು ದುರುಗಪ್ಪ.<br>5)ಗಂಗಮ್ಮ ತಂದೆ ಲೇಟ್ ತೆಲುಗು ದುರುಗಪ್ಪ.<br>6)ಬಾಗ್ಯಮ್ಮ ತಂದೆ ಲೇಟ್ ತೆಲುಗು ದುರುಗಪ್ಪ.<br>7)ಪದ್ಮ ತಂದೆ ಲೇಟ್ ತೆಲುಗು ದುರುಗಪ್ಪ.<br>ಪ್ರತಿವಾದಿಗಳು | 837ಬಿಪೈಕಿ. | 7-31 |

ಈ ಮೇಲಿನಂತೆ ಸಿವಿಲ್ ಕೋರ್ಟ ಡಿಕ್ರಿ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 27-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ, ಗುಡೇಕೋಟೆ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕಾಡಮ್ಮ ತಂದೆ ತೆಲುಗು ಬಸಪ್ಪ, ಗಂಗಮ್ಮ ತಂದೆ ತೆಲುಗು ಬಸಪ್ಪ, ಗುಡೇಕೋಟೆ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಗುಡೇಕೋಟೆ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.